ಕೊಡುವುದಕ್ಕೆ 2 ತಿಂಗಳ ಕಾಲಾವಕಾಶ ಬೇಕು ಎನ್ನುವುದು ಜನರ ಬೇಡಿಕೆಯಾಗಿರುತ್ತದೆ. ಈಗ ಸರ್ಕಾರ ತಪ್ಪಿತಸ್ಥನಾಗಿ ಜನರ ಕೈಗೆ ಸಿಗುತ್ತಿಲ್ಲ, ಪತ್ರಿಕೆಯಲ್ಲಿ ನನ್ನ ಹೆಸರು ಬಂದಿದ್ದರಿಂದ ನಾನು ಜನರ ಕೈಗೆ ತಪ್ಪಿತಸ್ಥನಾಗಿ ಸಿಗುತ್ತಿದ್ದೇನೆ. ಆದ್ದರಿಂದ, ಒಬ್ಬ ಮಂತ್ರಿಗಳ ಪರವಾಗಿ ಇನ್ನೊಬ್ಬ ಮಂತ್ರಿಗಳು ಉತ್ತರ ಕೊಟ್ಟರೆ ಅದು ಸಿಂಧು ಅಲ್ಲವೇ ? ಸಿಂಧು ಅಲ್ಲ ಎನ್ನುವುದಾದರೆ ಅದನ್ನು ಈ ಸದನದಲ್ಲಿ ಹೇಳಿ. ಯಾವ ಮಂತ್ರಿ ಹೇಳಿದರೂ ಅದನ್ನು ಸರ್ಕಾರವೇ ಒಪ್ಪಿದೆ ಎನ್ನುವುದಾದರೆ ಹಾಗೆಂದು ನನಗೆ ಉತ್ತರ ಕೊಡಿ. ನಮ್ಮಲ್ಲಿಗೆ ಒಂದು ಸಾಕ್ಷ್ಯ ಆದರೂ ಕಳುಹಿಸಿಕೊಡಿ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಕಳೆದ ಅಧಿವೇಶನದಲ್ಲಿ ಈ ವಿಷಯ ಚರ್ಚೆಗೆ ಬಂದಂಥ ಸಂದರ್ಭದಲ್ಲಿ ಮಾನ್ಯ ಮಿತ್ರರು ಹೇಳಿದ ಹಾಗೆ ಉತ್ತರ ಕೊಡುವಾಗ ಸಂಬಂಧಪಟ್ಟ ಮಂತ್ರಿಗಳು ಇರಲಿಲ್ಲ. ಇದಕ್ಕೆ ನಮ್ಮ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಉತ್ತರ ಕೊಡುವಾಗ ನಾನು ಸದನದಲ್ಲಿದ್ದೆ. ಸರ್ಕಾರದ ವತಿಯಿಂದ ಯಾವುದೇ ಒಂದು ಆಶ್ವಾಸನೆಯನ್ನು ಕೊಟ್ಟರೆ ಅದು ಸರ್ಕಾರದ ವತಿಯಿಂದ ಕೊಡುತ್ತಿರತಕ್ಕಂಥ ಆಶ್ವಾಸನೆ ಎನ್ನುವುದು ಅದು ಖಾತರಿಯಾಗಿರುತ್ತದೆ. ಬಹುಶಃ ಆ ಮಂತ್ರಿ ಕೊಟ್ಟಿರತಕ್ಕಂಥ ಆಶ್ವಾಸನೆ ಈ ಮಂತ್ರಿಗೆ ಲಗತ್ತು ಆಗುವುದಿಲ್ಲ ಎನ್ನುವಂಥ ಭಾವನೆ ನಿಮ್ಮ ಮನಸ್ಸಿನಲ್ಲಿ ಬೇಡ. ಪ್ರಾಮುಖ್ಯವಾಗಿ ಮೊದಲು ನಿಮ್ಮ ಹೆಸರು ಪತ್ರಿಕೆಯಲ್ಲಿ ಬಂದು ನಿಮ್ಮಿಂದ ಈ ಕೆಲಸ ಆಯಿತು ಎಂದು ಹೇಳುತ್ತಿರತಕ್ಕಂಥದ್ದು, ಬಂದ ಮೇಲೆ ಇದು ಆಗಲಿಲ್ಲ ಎಂದರೆ ನಿಮಗೆ ಸ್ವಲ್ಪಮಟ್ಟಿಗೆ ಕಷ್ಟ ಆಗುತ್ತದೆ. ಇದು ನನಗೆ ಅರ್ಥವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಏನು ಕ್ರಮವನ್ನು ಕೈಗೊಂಡಿದ್ದೇವೆಂದು ಶ್ರೀಮಾನ್ ಬಸವಣ್ಣಪ್ಪನವರಿಂದಲೇ ನಾಳೆಯ ದಿವಸ ಇಲ್ಲಿ ಒಂದು ಹೇಳಿಕೆಯನ್ನು ಕೊಡಿಸಲಾಗುವುದು.

ಉಡುಪಿ ನಗರಕ್ಕೆ ನೀರನ್ನು ಒದಗಿಸಲು ಸ್ವರ್ಣಾ ನದಿಯ ಎರಡನೇ ಹಂತದ ಯೋಜನೆಯ ಪ್ರಾರಂಭ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪಾಧ್ಯಕ್ಷರೆ, ಉಡುಪಿ ಪುರಸಭೆ ವ್ಯಾಪ್ತಿಯನ್ನು ನಗರಸಭೆ ವ್ಯಾಪ್ತಿಗೆ ವಿಸ್ತರಿಸಲ್ಪಟ್ಟು ಈಗಾಗಲೇ ಮುತ್ತೂರು, ಮಣಿಪಾಲ, ಬೈಲೂರು, ಮಲ್ಪೆ, ಹಿರ್ಗಾನ, ಮುಂತಾದವನ್ನು ಸೇರಿಸಲ್ಪಟ್ಟಿದೆಯೆಂದು ಗೊತ್ತಾಗಿದೆ. 24 ವರ್ಷಗಳ ಹಿಂದೆ ಉಡುಪಿ ನಗರಸಭೆಗೆ ಸ್ವರ್ಣಾ ನದಿಯ ಪ್ರಥಮ ಹಂತದ ಯೋಜನೆಯನ್ನು ಕಾರ್ಯಗತಗೊಳಿಸಿದ್ದು ಇದು 20 ವರ್ಷಗಳಿಗೆ ಮಾತ್ರ ಸೀಮಿತಗೊಂಡು ಈ ಯೋಜನೆಯನ್ನು ಮಾಡಲಾಗಿತ್ತು. ಆಗ ಉಡುಪಿ ಪುರಸಭೆಯಲ್ಲಿ 45 ಸಾವಿರ ಜನಸಂಖ್ಯೆ ಇದ್ದರೆ ಈಗ 1 ಲಕ್ಷದ 15 ಸಾವಿರ ಜನಸಂಖ್ಯೆಯುಳ್ಳ ನಗರಸಭೆಯಾಗಿ ಪರಿವರ್ತನೆ ಹೊಂದಿದೆ. ಅಂತರರಾಷ್ಟ್ರೀಯ ಮಟ್ಟದ ಮಣಿಪಾಲ ಹಾಗೂ ಭಾರತದೇಶದಲ್ಲಿಯೇ ಅತ್ಯಂತ ಹೆಚ್ಚು ಮೀನುಗಾರಿಕೆ ನಡೆಯುವ ಪ್ರದೇಶವಾದಂಥ ಮಲ್ಪೆ ಪ್ರದೇಶ ಈ ನಗರಸಭೆಗೆ ಸೇರಿದ್ದು, ಈಗಾಗಲೇ 25 ಕೋಟಿ ರೂಪಾಯಿಗಳ ಹೊಸ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ ಎಂದು ಕಳೆದ ಆಗಸ್ಟ್ 25 ರಂದು ಜಿಲ್ಲೆಯ ಉದ್ಘಾಟನಾ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಮಕ್ಷಮದಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರು ಒಂದು ಘೋಷಣೆ

ಮಾಡಿದರು. ಅದರ ಜೊತೆಗೆ ಈ ಸದನದಲ್ಲಿ ಕೂಡ ಅಲ್ಲಿರತಕ್ಕಂಥ ಹೊಸ ಯೋಜನೆಯನ್ನು ಕಾರ್ಯಗತಗೊಳಿಸಲಿಕ್ಕೆ ಸುಮಾರು 3-4 ವರ್ಷಗಳು ಬೇಕಾಗುವುದರಿಂದ ಅಲ್ಲಿಯ ಇತರ ಪ್ರದೇಶಗಳಲ್ಲಿರತಕ್ಕಂಥ ನೀರಿನ ಸಮಸ್ಯೆಯ ತಾತ್ಕಾಲಿಕ ಪರಿಹಾರಕ್ಕಾಗಿ ವಿಶೇಷ ಅನುದಾನವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದರು. ಆದರೆ ಇದುವರೆಗೆ ಉಡುಪಿ ನಗರಸಭೆಗೆ ನೀರು ಸರಬರಾಜು ಬಗ್ಗೆ ಯಾವುದೇ ವಿಶೇಷ ಅನುದಾನವನ್ನು ಕೊಟ್ಟಿಲ್ಲ. ಇದರ ಜೊತೆಗೆ 22 ಕೋಟಿ ರೂಪಾಯಿಗಳ ಹೊಸ ಸ್ವರ್ಣಾ ನದಿಯ 2ನೇ ಹಂತದ ಯೋಜನೆ ಏನು ಇದೆ, ಅದನ್ನು ಕಾರ್ಯಗತಗೊಳಿಸುವುದಾಗಲಿ, ಅದರ ಮಂಜೂರಾತಿಯ ಬಗ್ಗೆ ಕೂಡ ಪ್ರಕ್ರಿಯೆ ಇನ್ನೂ ಪ್ರಾರಂಭವಾಗಿಲ್ಲ ಎನ್ನುವ ಮಾಹಿತಿ ನನಗೆ ಬಂದಿದೆ. ಆದ್ದರಿಂದ ಉಡುಪಿ ನಗರಸಭೆಗೆ ಈಗ ಅದರಲ್ಲೂ ಕೂಡ ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಇರತಕ್ಕಂಥ ತೀವ್ರ ನೀರಿನ ಸಮಸ್ಯೆಗೆ ಪರಿಹಾರ ಮಾಡಲಿಕ್ಕೆ ತಾತ್ಕಾಲಿಕ ಪರಿಹಾರದಲ್ಲಿ ವಿಶೇಷ ಅನುದಾನವನ್ನು ತಕ್ಷಣ ಬಿಡುಗಡೆಗೊಳಿಸಬೇಕೆಂದು ಕೇಳುವುದರೊಂದಿಗೆ ಸ್ವರ್ಣಾ ನದಿಯ2ನೇ ಹಂತದ ಯೋಜನೆ ಬಗ್ಗೆ ಕೂಡ ಪ್ರಕ್ರಿಯೆ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಸ್ವರ್ಣಾ ನದಿಯ ಎರಡನೇ ಹಂತದ ಯೋಜನೆಗೆ 22.50 ಕೋಟಿ ರೂಪಾಯಿಗಳ ಅಂದಾಜು ಮಾಡಿ ಯೋಜನೆ ಸಿದ್ಧಮಾಡಿದ್ದೇವೆ. ವೆಸ್ಟ್‌ಕೋಸ್ಟ್ ಪ್ರಾಜೆಕ್ಟ್‌ನಲ್ಲಿ ಈ ಕರಾವಳಿ ಪ್ರದೇಶದಲ್ಲಿ ಬರತಕ್ಕಂಥ ದಕ್ಷಿಣ ಕನ್ನಡ ಜಿಲ್ಲೆಯ 6 ಪಟ್ಟಣಗಳು ಮತ್ತು ಉತ್ತರ ಕನ್ನಡ ಜಿಲ್ಲೆಯ 8 ಪಟ್ಟಣಗಳು ಹೀಗೆ ಒಟ್ಟು ಹೀಗೆ 14 ಪಟ್ಟಣಗಳನ್ನು ಗುರುತು ಮಾಡಿ 140 ಕೋಟಿ ರೂಪಾಯಿಗಳ ಅಂದಾಜಿನ ಯೋಜನೆಯನ್ನು ತಯಾರು ಮಾಡಿದ್ದೇವೆ. ಈ ಯೋಜನೆಗೆ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಸಾಲವನ್ನು ಪಡೆಯಬೇಕೆಂದು ಆ ಬ್ಯಾಂಕ್‌ಗೆ ಪ್ರಸ್ತಾವನೆಯನ್ನು ಸಲ್ಲಿಸಿ ಕ್ರಮ ಕೈಗೊಳ್ಳುತ್ತಿದ್ದೇವೆ. ಇದರ ಜೊತೆಗೆ ಉಡುಪಿ ಹೊಸ ಜಿಲ್ಲೆ ಕೂಡ ಆಗಿದೆ ಮತ್ತು ಅದು ಪುಣ್ಯಕ್ಷೇತ್ರ ಕೂಡ ಆಗಿದೆ. ಆದ್ದರಿಂದ ಈ ಬಗ್ಗೆ ಕ್ರಮ ತೆಗೆದುಕೊಂಡು ಯೋಜನೆಯನ್ನು ಸಿದ್ದಮಾಡಿ ಅದಕ್ಕೆ ಹಣಕಾಸು ಸಿಗುವಂಥ ಕಾರ್ಯ ಆಗಬೇಕಾಗಿದೆ.

4.50 ಪಿ.ಎಂ.

ಈ ಬೇಸಿಗೆಯ ಸಮಯದಲ್ಲಿ ಈಗ ತುರ್ತಾಗಿ ಏನಾದರೂ ಕ್ರಮ ಕೈಗೊಳ್ಳಬೇಕೆನ್ನುವುದು ಮತ್ತು ಪರಿಹಾರ ಮಾಡಿಕೊಡಿ ಎನ್ನುವ ಮಾನ್ಯ ಸದಸ್ಯರ ಕಳಕಳಿ ಇದೆ. ಅದಕ್ಕಾಗಿ, ಕುಡಿಯುವ ನೀರಿನ ಕೊರತೆ ಇರುವ ಕಡೆ ಪರಿಹಾರ ಒದಗಿಸುವುದಕ್ಕೆ ಅಭಾವ ಪರಿಹಾರದ ಕಾಮಗಾರಿಗಳಡಿಯಲ್ಲಿ ಕೆಲಸ ತೆಗೆದುಕೊಳ್ಳುವುದಕ್ಕೆ ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು, ಮಾನ್ಯ ಸದಸ್ಯರ ಹತ್ತಿರ ಮಾತನಾಡಿ, ಎಷ್ಟು ಭಾಗಗಳಲ್ಲಿ ವಿಸ್ತೃತ ಪ್ರದೇಶಗಳಲ್ಲಿ ಈ ತೊಂದರೆ ಇದೆ ಎಂಬ ಬಗ್ಗೆ ನನ್ನ ಹತ್ತಿರ ಮಾಹಿತಿ ಇದ್ದು, ಅದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ತಿಳಿಸಿ, ಎಷ್ಟು ಲಕ್ಷ ಹಣ ಕೊಡಬೇಕೆಂಬ ಬಗ್ಗೆ ಮಾಹಿತಿ ತೆಗೆದುಕೊಂಡು ಆ ಕೆಲಸ ಮಾಡುತ್ತೇನೆ.